# ಹಿರಣ್ಣಯ್ಯ ಸರಳತೆಗೆ ಮರುಳಾದೆ!

**ಕನ್ನಡ ರಂಗಭೂಮಿಯಲ್ಲಿ ಸಾಕಷ್ಟು ಹೆಸರು ಮಾಡಿ ಮಹಾರಾಜನಂತೆ ಮೆರೆದ ಮಾಸ್ಟರ್ ಹಿರಣ್ಣಯ್ಯ ಅವರೊಂದಿಗೆ ಕೆಲಕಾಲ ಕಳೆಯುವ ಅವಕಾಶ ಒದಗಿ ಬಂದದ್ದು ನನ್ನ ಸೌಭಾಗ್ಯ. ಅವರ ಸರಳತೆ, ಕಲೆಯ ಮೇಲಿರುವ ಅಗಾಧ ಪ್ರೀತಿ, ಶ್ರದ್ಧೆ, ಪ್ರೌಢಿಮೆ ನಿಜಕ್ಕೂ ಅಚ್ಚರಿ ಹುಟ್ಟಿಸುವಂಥದ್ದು.**

**■ ಎನ್.ವಿ. ಕಮಲಮ್ಮ**



ರಂಗಭೂಮಿ ಮೇಲೆ ಅಪಾರ ಪ್ರೀತಿಯಿದ್ದ ನನಗೆ ಈ ಕ್ಷೇತ್ರದಲ್ಲಿ ಸಾಧನೆಯ ಶಿಖರವಾಗಿದ್ದ ಮಾಸ್ಟರ್ ಹಿರಣ್ಣಯ್ಯ ಅವರ ಮೇಲೆ ಇನ್ನಿಲ್ಲದ ಗೌರವ, ಪ್ರೀತಿ. ಅವರನ್ನು ಭೇಟಿಯಾಗಿ ಮಾತನಾಡಬೇಕು ಎಂಬ ಹಂಬಲ ಮನಸ್ಸಿನಲ್ಲಿ ಮಡುಗಟ್ಟಿತ್ತು. ಒಂದು ದಿನ ಅವರನ್ನು ಖುದ್ದಾಗಿ ಭೇಟಿಯಾಗುವ ಸುಯೋಗವೂ ನನ್ನದಾಯಿತು.

ಅಂದ ಹಾಗೆ ನಾನು ಮಾಸ್ಟರ್ ಹಿರಣ್ಣಯ್ಯ ಅವರನ್ನು ಮೊದಲು ಭೇಟಿ ಮಾಡಿದ್ದು 1963ರಲ್ಲಿ. ಅಂದು ಅವರ ಸುಪ್ರಸಿದ್ಧ ನಾಟಕ 'ಲಂಚಾವತಾರ'ದ 50ನೇ ಪ್ರದರ್ಶನ. ಆ ದಿನಗಳಲ್ಲಿ ಅವರ ನಾಟಕಗಳು 'ಹಿರಣ್ಣಯ್ಯ ಮಿತ್ರ ಮಂಡಳಿ' ಎಂಬ ಬ್ಯಾನರ್‌ನಲ್ಲಿ ಈಗ ಕೆಂಪೇಗೌಡ ಬಸ್ ನಿಲ್ದಾಣ ಇರುವ ಜಾಗದಲ್ಲಿ ನಡೆಯುತಿತ್ತು. ಆ ದಿನ, ಹಿರಣ್ಣಯ್ಯ ಅವರು ಬಾಗಿಲ್ಲಲೇ ನಿಂತು, ನಾಟಕಕ್ಕೆ ಬಂದವರೆಲ್ಲರಿಗೂ ಲಾಡು ಹಂಚಿದ್ದು ನನಗೆ ಇನ್ನೂ ನೆನಪಿದೆ.

ನಂತರ ನಮ್ಮ ಶಾಲೆಯ ವಾರ್ಷಿಕೋತ್ಸವವನ್ನು ಕಬ್ಬನ್ ಪಾರ್ಕ್‌ನ ಬಾಲಭವನದಲ್ಲಿ ಆಚರಿಸಿದಾಗ ಮಾಸ್ಟರ್ ಹಿರಣ್ಣಯ್ಯ ಅವರನ್ನೇ ಮುಖ್ಯಅತಿಥಿಯಾಗಿ ಆಹ್ವಾನಿಸಿದ್ದೆವು. ಆ ದಿನ ತಮ್ಮ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ಮುಗಿಸಿಕೊಂಡು ನೇರವಾಗಿ ನಮ್ಮ ಕಾರ್ಯಕ್ರಮಕ್ಕೆ ಬಂದರು. ಮೊದಲೇ ಒಪ್ಪಿದ ಕಾರ್ಯಕ್ರಮವಾಗಿದ್ದು, ಬಾರದೇ ಇದ್ದರೆ ನಮಗೆ ಬೇಸರವಾಗಬಹುದು ಎಂಬ ಕಾರಣದಿಂದ ಆ ನೋವಿನಲ್ಲೂ ಒಂದು ಗಂಟೆ ತಡವಾಗಿ ಬಂದರು. ಕೂಡಲೇ ಕ್ಷಮೆ ಕೇಳಿ ತಮ್ಮ ಭಾಷಣ ಆರಂಭಿಸಿದ್ದು ಅವರ ಸರಳತನಕ್ಕೆ ಸಾಕ್ಷಿಯಾಗಿತ್ತು.

ಅದಾಗಿ ಹಲವಾರು ಬಾರಿ ವಿವಿಧ ಕಾರ್ಯಕ್ರಮಗಳಲ್ಲಿ ಅವರನ್ನು ಭೇಟಿ ಮಾಡುವ ಸದವಕಾಶವೂ ನನಗೆ ಒದಗಿ ಬಂದಿತ್ತು. 2004ರಲ್ಲಿ ತಮ್ಮ ಮೊಮ್ಮಗ ಆದಿತ್ಯನ ಉಪನಯನಕ್ಕೂ ನಮ್ಮನ್ನು ಆಹ್ವಾನಿಸಿದ್ದರು. ಅಂದು ತಮ್ಮ ಅಭಿನಂದನಾ ಗ್ರಂಥ 'ಅನ್ನದಾತರ ಅಂಗಳದಿಂದ' ಪುಸ್ತಕವನ್ನು ಸ್ವಹಸ್ತಾಕ್ಷರ ಮಾಡಿ ಕೊಟ್ಟಿದ್ದು ಈಗಲೂ ನನ್ನ ಬಳಿ ಇದೆ.

ಮಲ್ಲೇಶ್ವರಂ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷೆಯಾಗಿ ನಾನು ಮಾಸ್ಟರ್ ಹಿರಣ್ಣಯ್ಯ ಅವರನ್ನು ಸಮಾರಂಭಕ್ಕೆ ಕರೆದಾಗ ಸಂತೋಷದಿಂದ ಒಪ್ಪಿಕೊಂಡು, ನೆರೆದ್ದಿದ್ದ ಎಲ್ಲ ಹಿರಿಯ ನಾಗರಿಕರನ್ನು ತಮ್ಮ ಅಪ್ರತಿಮ ವಾಕ್ಚರಿಯಿಂದ ರಂಜಿಸಿದರು. ಇಂದಿಗೂ ಹಲವಾರು ಸದಸ್ಯರು ಅವರ ಅಣಿಮುತ್ತುಗಳನ್ನು ಮೆಲುಕು ಹಾಕುತ್ತಿರುತ್ತಾರೆ. ಅಂದು ಅವರಿಗೆ ನೆನಪಿನ ಕಾಣಿಕೆಯಾಗಿ ನೀಡಿದ ತಮ್ಮ ಕುಲದೈವ ಶ್ರೀ ನರಸಿಂಹ ಸ್ವಾಮಿ ಅವರ ಅಪರೂಪದ ಫೋಟೋವನ್ನು ಸಂತೋಷದಿಂದ ಸ್ವೀಕರಿಸಿ, ಪೂಜಾ ಕೊಠಡಿಯಲ್ಲಿ ಇಟ್ಟು,ನಿತ್ಯ ಪೂಜೆ ಸಲ್ಲಿಸುವುದಾಗಿ ತಿಳಿಸಿದರು. ವಯಸಿನ್ನಲ್ಲಿ ಅವರಿಗಿಂತ ಎರಡು ವರ್ಷ ಹಿರಿಯಳಾದ ನನಗೆ, ಅವರು ತೋರುತ್ತಿದ್ದ ಗೌರವ, ಪ್ರೀತಿ, ವಿಶ್ವಾಸಗಳಿಗೆ ನಾನು ಸದಾ ಚಿರಋಣಿ.

ಸಮಾಜದ ಅಂಕುಡೊಂಕುಗಳನ್ನು ತಮ್ಮ ತಲೆ, ನಾಲಿಗೆ ಮತ್ತು ಲೇಖನಿ... ಈ ಮೂರು ತ್ರಿಶೂಲಗಳ ಮೂಲಕ ತೋರಿಸಿದ, ಭ್ರಷ್ಟ ರಾಜಕಾರಣಿಗಳಿಗೆ ಸಿಂಹಸ್ವಪ್ನದಂತಿದ್ದ, ಪ್ರೇಕ್ಷಕರನ್ನು 'ಅನ್ನದಾತರೆಂದು'ಗೌರವಿಸುತ್ತಿದ್ದ ಅವರು ಕೊಟ್ಟ ಹಣಕ್ಕೆ ದುಪ್ಪಟ್ಟು ಖುಷಿಯನ್ನು ಕೊಟ್ಟು ಕಳುಹಿಸುತ್ತಿದ್ದ ಹಿರಣ್ಣಯ್ಯ ರಂಗಭೂಮಿಯ ನಕ್ಷತ್ರ, ಲಂಚಾವತಾರದ 'ದತ್ತು', ನಡುಬೀದಿ ನಾರಾಯಣದ 'ತೀರ್ಥರೂಪು', ಭ್ರಷ್ಟಾಚಾರದ 'ದಫೇದಾರ್ ಮುರಾರಿ', ಸದಾರಮೆಯ ಕಳ್ಳ',.. ಹೀಗೆ ಅಸಂಖ್ಯಾತ ಪಾತ್ರಗಳಲ್ಲಿ ಮಿಂಚಿ ಮರೆಯಾದರು ರಂಗಭೂಮಿಯ one and only ಮಾಸ್ಟರ್ ಹಿರಣ್ಣಯ್ಯ. ಅವರೊಂದಿಗೆ ಕಳೆದ ಕ್ಷಣಗಳು ಎಂದೂ ಮರೆಯಲಾರದ ಸವಿನೆನಪಾಗಿ ಜೀವನದಲ್ಲಿ ಉಳಿದಿದೆ. ■